# ಕಪ್ಪು ಬಿಳುಪಿನಲ್ಲಿ ಕೊರೊನಾ ಕಥೆಗಳು

ಇತಿಹಾಸ ಎಂದಿಗೂ ಮರೆಯಬಾರದ ಕೊರೊನಾ ಕಾಲಘಟ್ಟದ ನೆನಪುಗಳ ದೃಶ್ಯಸಂಗ್ರಹ 'ಲಿವಿಂಗ್ ಎ ಡಾರ್ಕ್ ನೈಟ್'. ಕಪ್ಪು ಬಿಳುಪಿನ ಮಾಧ್ಯಮದಲ್ಲಿ, ಕಪ್ಪು ಬಿಳುಪಲ್ಲದ ರೀತಿಯಲ್ಲಿ ಕೊರೊನಾ ಕಥೆಗಳನ್ನು ಅನಾವರಣಗೊಳಿಸಲಾಗಿದೆ.

■ ಎಸ್ಸೆನ್

'ಪುಟ್ಟದೊಂದು ವೈರಸ್ ಇಷ್ಟು ದೊಡ್ಡ ಜಗತ್ತಿಗೆ ಏನೆಲ್ಲಾ ತೋರಿಸಿಬಿಟ್ಟಿತು! ನೊಂದ ಮನಕ್ಕೆ ಸಾಂತ್ವನವಾಗಿದ್ದ ಮನುಷ್ಯನ ಸ್ಪರ್ಶವೇ ಕಂಟಕವಾಯಿತು. ಜೀವವಾಯುವೇ ತುಟ್ಟಿಯಾಯಿತು. ಮಾಸ್ಕ್–ಆಸ್ಪತ್ರೆ–ಸ್ಯಾನಿಟೈಸರ್–ಕ್ವಾರಂಟೈನ್–ಲಾಕ್‌ಡೌನ್–ಅಬ್ಬಾ... ಎಂದಿಗೂ ಕೇಳರಿಯದ ಅವೆಷ್ಟು ಪದ–ಪರಿಕಲ್ಪನೆಗಳು! ಜೀವನದ ಬಗ್ಗೆ ಸಾವಿರಾರು ಕನಸು ಕಂಡಿದ್ದ ಅದೆಷ್ಟು ಜನ ಏಕಾಏಕಿ ಹೊರಟೇಬಿಟ್ಟರು, ಸಾವಿನಲ್ಲೂ ಘನತೆ ಪಡೆಯದೆ. ಜೀವ ಉಳಿಸಿಕೊಳ್ಳುವುದಷ್ಟೇ ಮುಖ್ಯ ಧ್ಯೇಯವೆನಿಸಿದ, ಕೊರೊನಾ ಕಲಿಸಿದ ಖಾಲಿತನ ಎಂದಿಗಾದರೂ ಮರೆಯಲಾದೀತೇ? ಕೊರೊನಾ ಸೋಂಕು ಕೊಟ್ಟ ಇಂಥ ನೂರಾರು ಅನುಭವಗಳು ಈ ಕಪ್ಪು ಬಿಳುಪಿನ ಛಾಯೆಯಲ್ಲಿ ಮೂರ್ತರೂಪ ಪಡೆದುಕೊಂಡಿವೆ...'

ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ನಡೆಯುತ್ತಿರುವ 'ಲಿವಿಂಗ್ ಎ ಡಾರ್ಕ್ ನೈಟ್' ಪ್ರದರ್ಶನದ ಆಯೋಜಕಿ, ಕಲಾವಿದೆ ಪೌಲಾ ಸೇನ್‌ಗುಪ್ತಾ, ತಮ್ಮ ಈ ಭಿನ್ನ ಕಲಾ ಪ್ರದರ್ಶನದ ಮುಖ್ಯ ಉದ್ದೇಶವನ್ನು ಒಂದೇ ಮಾತಿನಲ್ಲಿ ಬಿಡಿಸಿಟ್ಟದ್ದು ಹೀಗೆ.

ಮೂರು ವರ್ಷಗಳ ಹಿಂದೆ ಕೊರೊನಾ ಕರಿನೆರಳಿನಲ್ಲಿ ಜನರು ಕಂಡುಂಡ ನೋವು–ಹತಾಶೆ–ಸಾವಿನ ಕಥೆಗಳ ದೃಶ್ಯರೂಪದಂತಿರುವ 'ಲಿವಿಂಗ್ ಎ ಡಾರ್ಕ್‌ನೈಟ್' ಪರಿಕಲ್ಪನೆಗೆ 105 ಕಲಾವಿದರ 108 ಕಲಾಕೃತಿಗಳು ಜೊತೆಯಾಗಿವೆ. ತೀವ್ರ ಸಾವು ನೋವಿಗೆ ಸಾಕ್ಷಿಯಾದ ಕೊರೊನಾ ಎರಡನೇ ಅಲೆ ಸಂದರ್ಭದಲ್ಲಿ ನೂರಾರು ಕಲಾವಿದರು ತಾವು ಕಂಡ, ಅನುಭವಿಸಿದ ಚಿತ್ರಣಗಳನ್ನು ಕಪ್ಪು ಬಿಳುಪಿನ ಮಾಧ್ಯಮದಲ್ಲಿ ಅಭಿವ್ಯಕ್ತಿಸಿದ್ದಾರೆ.

ಈ ಬಗ್ಗೆ ಪೌಲಾ ಅವರು ಮತ್ತಷ್ಟು ಸಂಗತಿಗಳನ್ನು ತೆರೆದಿಡುತ್ತಾರೆ; '2020ರಲ್ಲಿ ವಿಶ್ವದ ಗಟ್ಟಿತನವನ್ನೇ ಪಣಕ್ಕೊಡ್ಡುವಂತೆ ಮಾಡಿದ ಕೊರೊನಾದ ಹಲವು ಮುಖಗಳು ಇಲ್ಲಿ ದೃಶ್ಯರೂಪ ಪಡೆದಿವೆ. ಕೊರೊನಾ ಎರಡನೇ ಅಲೆ ಸಂದರ್ಭವೇ ಕೊರೊನಾ ಪರಿಣಾಮಗಳನ್ನು ಅಭಿವ್ಯಕ್ತಗೊಳಿಸುವಂತೆ ಕಲಾವಿದರನ್ನು ಆಹ್ವಾನಿಸಲಾಗಿತ್ತು. 'ಬ್ಲಾಕ್ ಅಂಡ್ ವೈಟ್ ರಿಲೀಫ್ ಪ್ರಿಂಟ್' ಮುದ್ರಣ ಕಲಾ ಪ್ರಕಾರ ಬಳಸಿಕೊಂಡು ಕೊರೊನಾ ಅನುಭವಗಳಿಗೆ ಚೌಕಟ್ಟು ಹಾಕುವಂತೆ ಕರೆ ನೀಡಲಾಗಿತ್ತು. ಇದಕ್ಕೆ ನೂರಾರು ಕಲಾ ವಿದ್ಯಾರ್ಥಿಗಳು, ಕಲಾ ಶಿಕ್ಷಕರು, ಕಲಾವಿದರು ಸ್ಪಂದಿಸಿದರು'.

ಕಲಾ ಚೌಪಲ್ ಟ್ರಸ್ಟ್ ಸಹಭಾಗಿತ್ವದೊಂದಿಗೆ, ಗುರುಗ್ರಾಮದಲ್ಲಿ ಮೇ 2021ರಲ್ಲಿ 'ಲಿವಿಂಗ್ ಎ ಡಾರ್ಕ್ ನೈಟ್' ಎಂಬ ಕಲಾ ಯೋಜನೆಯನ್ನೇ ಆರಂಭಿಸಿದರು ಪೌಲಾ. ಕೋಲ್ಕತ್ತಾದ ರಬೀಂದ್ರ ಭಾರತಿ ವಿಶ್ವವಿದ್ಯಾಲಯದ ವಿಷುಯಲ್ ಆರ್ಟ್ಸ್‌ನ 'ಗ್ರಾಫಿಕ್ಸ್–ಪ್ರಿಂಟ್‌ಮೇಕಿಂಗ್ ವಿಭಾಗ'ದ ಸಿಬ್ಬಂದಿ ಡಾ. ಪೌಲಾ ಸೇನ್‌ಗುಪ್ತಾ, 'ದಿ ಪ್ರಿಂಟೆಡ್ ಪಿಕ್ಚರ್; ಫೋರ್ ಸೆಂಚುರೀಸ್ ಆಫ್ ಇಂಡಿಯನ್ ಪ್ರಿಂಟ್‌ಮೇಕಿಂಗ್' ಹಾಗೂ 'ಫಾರಿನ್ ಅಂಡ್ ಇಂಡಿಜಿನಿಯಸ್ ಇನ್‌ಫ್ಲುಯೆನ್ಸ್ ಇನ್ ಇಂಡಿಯನ್ ಪ್ರಿಂಟ್ ಮೇಕಿಂಗ್' ಪುಸ್ತಕಗಳನ್ನು ಬರೆದಿದ್ದಾರೆ.

ವಿಶ್ವದಲ್ಲಿ ರಾಜಕೀಯ ಹಾಗೂ ಸಾಮಾಜಿಕ ಪ್ರತಿಭಟನೆಯೊಂದಿಗೆ 'ಬ್ಲಾಕ್ ಅಂಡ್ ವೈಟ್ ರಿಲೀಫ್ ಪ್ರಿಂಟ್' ಮಾಧ್ಯಮದ್ದು ಐತಿಹಾಸಿಕ ಸಂಬಂಧ. ಹದಿನೆಂಟನೇ ಶತಮಾನದಲ್ಲಿ ವಿಲಿಯಂ ಹೊಗಾರ್ತ್, ಫ್ರಾನ್ಸಿಸ್ಕೊ ಗೋಯಾ, ಹೊನೊರ್ ಡೌಮಿಯರ್, ವಿಲಿಯಂ ಬ್ಲೇಕ್‌ನಂಥ ಯುರೋಪಿಯನ್ ಕಲಾವಿದರಿಂದ ಹಿಡಿದು ಜರ್ಮನ್ ಮಾನವತಾವಾದಿಗಳು ಮನುಷ್ಯನ ವೇದನೆಗಳನ್ನು ಅಭಿವ್ಯಕ್ತಗೊಳಿಸಲು ಈ ಪ್ರಿಂಟ್ ಮೇಕಿಂಗ್ ಮಾಧ್ಯಮ ಆರಿಸಿಕೊಂಡವರು. ಚೀನಾದ ಕಮ್ಯುನಿಸ್ಟ್ ಕ್ರಾಂತಿ, ಲ್ಯಾಟಿನ್ ಅಮೆರಿಕದ ಆಂದೋಲನಗಳಲ್ಲೂ ಈ ಮುದ್ರಣ ಕಲಾ ಮಾಧ್ಯಮದ ಇತಿಹಾಸವಿದೆ. ಹೀಗಾಗಿ ಕೊರೊನಾ ಕಥೆಗಳಿಗೂ ಕಪ್ಪು ಬಿಳುಪಿನ ಈ ಮಾಧ್ಯಮವೇ ಸೂಕ್ತ ಎಂದು ಆಯ್ಕೆ ಮಾಡಿಕೊಂಡರು ಕಲಾವಿದೆ ಪೌಲಾ.

ಫೆಬ್ರುವರಿ 2022ರಿಂದ ಈ ಯೋಜನೆಯನ್ನು ಪ್ರದರ್ಶನವಾಗಿ ಮಾರ್ಪಡಿಸಿ ಹಲವೆಡೆಗೆ ಕೊಂಡೊಯ್ದರು ಪೌಲಾ. ದೆಹಲಿಯ ಗ್ಯಾಲರಿ ಸ್ಪೇಸ್, ಇಂಡಿಯಾ ಆರ್ಟ್ ಫೇರ್ 2022, ಅಹಮದಾಬಾದಿನ ಆರ್ಟ್‌ಶಿಲಾ ಶಾಂತಿನಿಕೇತನ, ವಡೋದರಾದ ಎಂ.ಎಸ್. ಯೂನಿವರ್ಸಿಟಿಯ ಫೈನ್ ಆರ್ಟ್, ಕೋಲ್ಕತ್ತಾದ



